# ಬಂತು ಬಂತು ಕನ್ನಡ ರಾಜ್ಯೋತ್ಸವ

ಬಂತು ಬಂತು ಬಂತು ನಮ್ಮ
ಕನ್ನಡ ರಾಜ್ಯೋತ್ಸವ
ಬನ್ನಿರೆಲ್ಲ ಆಚರಿಸುವ
ಕನ್ನಡ ವಿಜಯೋತ್ಸವ

ಏನೆ ಬರಲಿ ಒಗ್ಗಟ್ಟಿರಲಿ
ಎನುತ ಮುಂದೆ ಸಾಗುವ
ನಾಡು ನುಡಿ ಸಂಸ್ಕೃತಿಯನು
ಉಳಿಸಿ ಬೆಳೆಸಿ ಸಲಹುವ

ತುಂಗ, ಭದ್ರೆ, ಬಾರೆ ಕಾವೇರಿ
ನೆಲವ ಶುದ್ಧಗೊಳಿಸುವ
ಕೃಷ್ಣೆ, ಹೇಮ, ಶರಾವತಿಯರೆ
ಹಚ್ಚಿರಿ ಕುಂಕುಮ ಗಂಧವ

ಕನ್ನಡ ಭಾಷೆಯಾಡುವ ಜನರೆ
ಸೇರಿರೆಲ್ಲ ಒಂದೆಡೆ
ಹರಿದು ಹಂಚಿ ಹೋದ ನೆಲವ
ಹಿಂಪಡೆಯಲು ಅಡಿಯಿಡಿ

ನಾಡಿಗೆ ದುಡಿದ ಮಹನೀಯರ
ನೆನೆದು ದಿನವೂ ಸ್ಮರಿಸುವ
ಭಾಷೆಗೆ ಹೋರಾಡುವವರ
ಸನ್ಮಾನಿಸಿರಿ ನಿತ್ಯವು

ಕಲೆ, ಸಾಹಿತ್ಯ ಉಳಿಸುವರಿಗೆ
ನೀಡಿ ಪ್ರಶಸ್ತಿ ಫಲಕವ
ಎಲ್ಲ ರಂಗದಿ ದುಡಿಯುವವರ
ಹೊಗಳಿ ಅವರ ಪ್ರಯತ್ನವ

ದಿನವೂ ಆಡಿ ಹಾಡಿ ಹೊಗಳಿ
ನಾಡ ನುಡಿಯ ಉಳಿಸುವ
ವರ್ಷವೆಲ್ಲ ಸಂಭ್ರಮದಲಿ
ಕನ್ನಡಕ್ಕಾಗಿ ದುಡಿಯುವ

**-ಜೇನಹಳ್ಳಿ ಸಿದ್ಧಲಿಂಗಪ್ಪ,
ಮೈಸೂರು**



ಆಸ್ಪತ್ರೆ ಎಂದು ತಿಳಿದಿತ್ತು. ಅದನ್ನು ಪತ್ತೆ ಹಚ್ಚಿ ಅಲ್ಲಿಗೆ ಹೋಗಿ ಚಿಕಿತ್ಸೆ ಪಡೆಯಿತು. ಮಾವುತನನ್ನು ಅಲ್ಲಿಯೇ ಚಿಕಿತ್ಸೆ ಪಡೆಯಲು ಬಿಟ್ಟು ಆ ಚಾಲಕನಿಗೆ ಬುದ್ಧಿ ಕಲಿಸಲೇಬೇಕೆಂದು ತೀರ್ಮಾನಿಸಿತು.

ಕರಿ ಕೋಟಿನವರು ನ್ಯಾಯಾಲಯಕ್ಕೆ ಹೋಗಿ ಬರುತ್ತಿರುವುದನ್ನು ಹಿಂದೆ ಪೇಟೆಗೆ ಬಂದಾಗ ನೋಡಿಕೊಂಡಿತ್ತು. ಅವರು ನ್ಯಾಯ ಕೊಡಿಸುವವರೆಂದು ತಿಳಿದಿತ್ತು. ಆನೆಯು ಯೋಚಿಸಿ ನ್ಯಾಯಕ್ಕಾಗಿ ಸೀದಾ ನ್ಯಾಯಾಲಯದ ದಾರಿ ಹಿಡಿಯಿತು. ನ್ಯಾಯಾಧೀಶರ ಮುಂದೆ ಹೋಗಿ ನಿಂತಿತು. ಘೀಳಿಡುತ್ತಾ ಸೊಂಡಿಲೆತ್ತಿ ನಮಸ್ಕರಿಸಿತು. ಅಲ್ಲಿದ್ದ ವಕೀಲರೆಲ್ಲರಿಗೂ ಆಶ್ಚರ್ಯವೋ ಆಶ್ಚರ್ಯ. ಅಲ್ಲದೇ ಗಾಬರಿಯೂ ಆಯಿತು. ನ್ಯಾಯಾಧೀಶರು ಧೈರ್ಯಗೆಡದೆ. ಸಮಾಧಾನದಿಂದ ಪ್ರೀತಿಯಿಂದ ಅದನ್ನು ನೋಡಿದರು. ಅದರ ಕಣ್ಣಿನಲ್ಲಿ ನೀರು ಬರುತ್ತಿತ್ತು. ನ್ಯಾಯ ದೊರಕಿಸಿಕೊಡಿ ಎಂದು ಅದರ ಕಣ್ಣುಗಳು ಹೇಳುತ್ತಿದ್ದವು. ತಲೆಗೆ ಹೊಟ್ಟೆಗೆ ಬಿದ್ದ ಪೆಟ್ಟಿನಿಂದ ರಕ್ತ ಒಸರುತ್ತಿತ್ತು. ಇದನ್ನು ಕಂಡು ಓಹೋ ! ಇದು ಎಲ್ಲೋ ಅಪಘಾತಕ್ಕೀಡಾಗಿದೆ. ಅವರ ವಿರುದ್ಧ ದೂರು ನೀಡಲು ಬಂದಿದೆ ಎಂದು ಯೋಚಿಸಿದ ನ್ಯಾಯಾಧೀಶರಿಗೆ ಆನೆಯ ಮೇಲೆ ಕರುಣೆ ಉಂಟಾಯಿತು. ಅದಕ್ಕೇನಾದರೂ ಸಹಾಯ ಮಾಡಬೇಕೆಂದು ಬಯಸಿದರು. ಅಲ್ಲಿಯೇ ಇದ್ದ ವಕೀಲರಿಗೆ ಅದರ ಪರವಾಗಿ ಒಂದು ದೂರಿನ ಅರ್ಜಿ ಬರೆದು ಕೊಡಿ ಎಂದರು. ದೂರಿನ ಅರ್ಜಿ ನ್ಯಾಯಾಧೀಶರ ಕೈ ಸೇರಿತು. ಎರಡು ದಿನ ಬಿಟ್ಟು ಬಾ ಎಂದು ಆನೆಗೆ ತಿಳಿಸಿದರು. ಆನೆಯು ಆಯ್ತು ಆಯ್ತು ಎಂದು ಎರಡು ಬಾರಿ ತಲೆ ಅಲ್ಲಾಡಿಸಿ ಹೋಯಿತು. ಸೀದಾ ಆಸ್ಪತ್ರೆಗೆ ಹೋಗಿ ಅಲ್ಲಿದ್ದ ಮಾವುತನನ್ನು ಕರೆದುಕೊಂಡು ತನ್ನ ಬಿಡಾರಕ್ಕೆ ನಡೆಯಿತು. ನ್ಯಾಯಾಧೀಶರು ಘಟನೆ ಬಗ್ಗೆ ವಿವರ ತಿಳಿಯಲು ಇಬ್ಬರು ವಕೀಲರನ್ನು ನೇಮಿಸಿದರು.

ಎರಡು ದಿನ ಕಳೆದ ಮೇಲೆ ವರದಿ ಕೊಟ್ಟರು. ಈ ವರದಿಯನ್ನು ಅವಲೋಕಿಸಿದ ನ್ಯಾಯಾಧೀಶರಿಗೆ ಬಸ್ಸಿನ ಚಾಲಕನ ತಪ್ಪೆಂದು ತಿಳಿಯಿತು. ಇದೊಂದು ಗುದ್ದೋಡು ಪ್ರಕರಣವಾಗಿತ್ತು. ಚಾಲಕನನ್ನು ಬಂಧಿಸಿ ತನ್ನಿರೆಂದು ಪೊಲೀಸರಿಗೆ ತಿಳಿಸಿದರು. ಎರಡು ದಿನ ಬಿಟ್ಟು ಬರಲು ತಿಳಿಸಿದ್ದರಿಂದ ನ್ಯಾಯಾಧೀಶರನ್ನು ಕಾಣಲು ಮಾವುತನೊಂದಿಗೆ ಆನೆಯೂ ಕೋರ್ಟಿಗೆ ಹಾಜರಾಯಿತು. ನ್ಯಾಯಾಧೀಶರೇ ಆನೆಯನ್ನು ಒಳಬರಲು ಹೇಳಿದರು. ಆನೆಯು ಮೆಲ್ಲಗೆ ನಿಧಾನವಾಗಿ ಒಳಗಡೆ ಪ್ರವೇಶಿಸಿತು. ಆನೆಯ ಔಷಧಿ ಖರ್ಚಿಗೆಂದು ಪರಿಹಾರದ ಮೊತ್ತದ ಐವತ್ತೊಂದು ಸಾವಿರದ ಒಂದು ರೂಪಾಯಿಗಳ ಚೆಕ್ ಅನ್ನು ಅದಕ್ಕೆ ನೀಡಿದರು. ಅದನ್ನು ಪಡೆದ ಆನೆ ನಿಸ್ಸಹಾಯಕರ ಪರವಾಗಿ ನ್ಯಾಯ ದೊರಕಿಸಿ ಕೊಟ್ಟು ಮಾನವೀಯತೆ ಮೆರೆದ ನ್ಯಾಯಾಧೀಶರನ್ನು ತನ್ನ ಸೊಂಡಿಲಿನಿಂದ ಬೆನ್ನು ಸವರಿ ಅವರೆದುರು ಮಂಡಿಯೂರಿ ಸೊಂಡಿಲೆತ್ತಿ ಮನಸಾ ನಮಸ್ಕರಿಸಿತು. ತಿರುಗಿ ಹೊರಡುವಾಗ ಕರಿಕೋಟು ಹಾಕಿದ ವಕೀಲರನ್ನು ಸೊಂಡಿಲೆತ್ತಿ ಕೃತಜ್ಞತಾ ಭಾವದಿಂದ ವಂದಿಸಿತು. ಆನಂದದಿಂದ ತನ್ನ ಬಿಡಾರಕ್ಕೆ ಮರಳಿತು.

ಮೂಕ ಪ್ರಾಣಿಗೆ ಬಸ್ಸಿನಿಂದ ಡಿಕ್ಕಿ ಹೊಡೆದಿರುವುದು ಹಿಂಸೆ. ಅಲ್ಲದೇ ಪ್ರಾಣಕ್ಕೆ ಕುತ್ತು ತರುವಂತಹದ್ದು ಎಂದು ಪರಿಗಣಿಸಿ ಚಾಲಕನಿಗೆ ಐದು ವರ್ಷ ಜೈಲು ಶಿಕ್ಷೆ ಹಾಗೂ ಇಪ್ಪತ್ತೈದು ಸಾವಿರ ರೂಪಾಯಿಗಳ ದಂಡ ವಿಧಿಸಿದರು. ಕೆಲಸದಿಂದ ವಜಾ ಕೂಡಾ ಆಯಿತು ಎಂಬ ವಿಚಾರವನ್ನು ಮಾವುತನಿಂದ ತಿಳಿದ ಟೆಡ್ಡಿ ಆನೆಯು ನಮಗೆ ಸಿಕ್ಕ ಜಯವೆಂದು ಸಂತಸದಿಂದ ಕುಣಿದಾಡಿತು.

**-ಪ್ರಕಾಶ್ ಆರ್. ಕಮ್ಮಾರ್, ಸಿಹಿಮೊಗೆ**